**REVIEW OF RESEARCH**
ISSN: 2249-894X
IMPACT FACTOR : 5.7631(UIF)
VOLUME - 12 | ISSUE - 5 | FEBRUARY - 2023

# ರಾಯಚೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು

ಡಾ ಶಿವಯ್ಯ
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು.



ಕೃಷ್ಣ–ತುಂಗೆಯ ತೋಳತೆಕ್ಕೆಯ ಜಿಲ್ಲೆ ರಾಯಚೂರು.ಇಲ್ಲಿ ಕಲೆ, ಸಾಹಿತ್ಯ, ಸಂಗೀತ, ಹೋರಾಟಕ್ಕೆ ಕೊರತೆ ಇಲ್ಲ. ಬ್ರೀಟಿಷರ ಮತ್ತು ನಿಜಾಮರ ಕಪಿಮುಷ್ಠಿಯಿಂದ ಜನರನ್ನು ಪಾರು ಮಾಡಲು ಅನೇಕ ಹೋರಾಟಗಾರರು ಹೋರಾಟಮಾಡಿ ಮಡಿದು ಅಸ್ತಂಗತರಾದರು.ಆದರೆ ಇಂದು ಅವರು ಜನರ ಮನದಲ್ಲಿ ಜೀವಂತರಾಗಿದ್ದಾರೆ.ಇಂತಹ ಹೋರಾಟಗಾರರಲ್ಲಿ ಪಂಡಿತ ತಾರಾನಾಥರು ಮೊದಲಿಗರು, ತಾರಾನಾಥರ ಬದುಕು ಒಂದು ದಂತಕತೆಯಾಗಿದೆ.ಅವರು ಜನರ, ದೇಶದ ಒಳತಿಗಾಗಿ ತಮ್ಮ ಬದುಕನ್ನು ಬದಿಗೊತ್ತಿ ಬದುಕಿದವರು.ಅವರ ಅಪಾರ ದೇಶ ಭಕ್ತಿ, ಸ್ವಾತಂತ್ರ್ಯ ಪ್ರೇಮ, ವೈಚಾರಿಕತೆ, ಆಯುರ್ವೇದದ ಪಾಂಡಿತ್ಯ, ಸಂಗೀತದ ಕಣಿ, ಅಪ್ರತಿಮ ನಾಟಕಕಾರದ ಪಂಡಿತ ತಾರಾನಾಥರರ ವ್ಯಕ್ತಿತ್ವ ಇಂದಿನ ಜನರಿಗೆ ಮಾದರಿ.

ಪಂಡಿತ ತಾರಾನಾಥರು 1891 ಜೂನ್ 5 ರಂದು ಮಂಗಳೂರಿನಲ್ಲಿ ಗೋವಿಂದರಾವ್ ಮತ್ತು ರಾಜೀವಬಾಯಿ ಇವರ ಮಗನಾಗಿ ಜನ್ಮ ತಾಳಿದರು.ಇವರು ಚಿಕ್ಕವರಿರುವಾಗಲೆ ತಂದೆಯನ್ನು ಕಳೆದುಕೊಂಡರು.ತಾಯಿಯ ಮಾರ್ಗದರ್ಶನದಲ್ಲಿ ಬೆಳೆಯುತ್ತಿರುವಾಗಲೇ ಕೆಲ ದಿನಗಳಲ್ಲಿ ತಾಯಿಯು ಸ್ವರ್ಗಸ್ತರಾದರು. ಹೈದ್ರಾಬಾದಿನಲ್ಲಿ ಚಿಕ್ಕಮ್ಮನ ಆಶ್ರಯ ಪಡೆದ ಇವರು ಅಲ್ಲಿಯೇ ಶಿಕ್ಷಣ ಪಡೆದು 13 ಭಾಷೆಗಳನ್ನು ಕರಗತಮಾಡಿಕೊಂಡರು. ಮೆಟ್ರಿಕ್ಯುಲೇಷನ್ ಪರೀಕ್ಷೆ ತೇರ್ಗಡೆಯಾಗಿ ಎಫ್.ವೈ.ಪರೀಕ್ಷೆಗೆ ಓದುವ ಸಂದರ್ಭದಲ್ಲಿ ಪಠ್ಯದ ಜೊತೆಗೆ ಮನಃಶಾಸ್ತ್ರ, ರಸಾಯನ ಶಾಸ್ತ್ರ, ಭೌತಶಾಸ್ತ್ರ, ಕಲೆ, ಸಾಹಿತ್ಯದ ಜೊತೆಗೆ ಗ್ರಂಥಾಲಯದಲ್ಲಿದ್ದ ಎಲ್ಲಾ ಧರ್ಮ ಗ್ರಂಥಗಳನ್ನು ಓದಿ ತಿಳಿದುಕೊಂಡು ತಾರಾನಾಥ ಪಂಡಿತರಾದರು.

ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಸ್ವಾತಂತ್ರ್ಯ ಬಯಸಿ ನಿಜಾಮರ ವಿರುದ್ಧ ಚಳುವಳಿ ಆರಂಭಿಸಿದರು.ಇದರಿಂದ ಕಾಲೇಜಿನಿಂದ ಅವರನ್ನು ಬಹಿಷ್ಕಾರ ಹಾಕಲಾಯಿತು.ಗೆಳೆಯರ ಗುಂಪು ಕಟ್ಟಿಕೊಳ್ಳುವ ಮೂಲಕ ನಿಜಾಂ ಸರಕಾರ ವಿರುದ್ಧ ಸಂಘಟನೆ ಮಾಡಿದರು.ಅಧಿಕಾರಿಗಳ ಲಂಚಗುಳಿತ, ಶೋಷಣೆಯ ಮನಸ್ಸುಗಳನ್ನು ವಿರೋದಿಸಿದರು.ಇಂತಹ ಕ್ರಿಯಾತ್ಮಕ ಚಟುವಟಿಕೆಗಳಿಂದ ಕೂಡಿದ ಇವರನ್ನು ಬೀದರನಿಂದ ರಾಯಚೂರಿಗೆ ವರ್ಗಾವಣೆ ಮಾಡಲಾಯಿತು.ಆದರೂ ತನ್ನತನವನ್ನು ಬಿಡದ ಇವರು ರಾಯಚೂರಿನಲ್ಲಿ ತಮ್ಮ ಹೋರಾಟವನ್ನು ಮುಂದುವರಿಸಿದರು.

ಸತತ ಯುದ್ಧಗಳಿಂದ ಕಂಗೆಟ್ಟ ನಿಜಾಮರು, ಯುದ್ಧದಿಂದಾದ ನಷ್ಟವನ್ನು ಜನರಿಂದ ಬರಿಸಲು ಮುಂದಾಗಿ ಒಂದು ದಿನ ರಾಯಚೂರಿನ ಹಾಷ್ಮಿಯಾ ಮೈದಾನದಲ್ಲಿ ಜನರಿಂದ ಕಾಣಿಕೆ ಪಡೆಯುತ್ತಿರುವಾಗ ನೂರಾರು ಶ್ರೀಮಂತರು, ವಕೀಲರು, ಸರಕಾರಿ ಸೇವಕರು ಧನ–ಕಾಣಿಕೆ ಸಲ್ಲಿಸಿ ಅವರಿಂದ ಸಾಂಕೇತಿಕ ಉಡುಗರೆ ಪಡೆದರು.ಸರಕಾರಿ ಸೇವಕರಾದ ಪಂಡಿತ ತಾರಾನಾಥರು "ಈ ನವಾಬನ ಭಿಕ್ಷೆಗೆ ಕಿರುಕಾಸೇ ಸಾಕು" ಎಂದು ಒಂದು ತೂತು ಬಿಲ್ಲೆಯನ್ನು ಎಸೆದು ಅಲ್ಲಿಂದ ಹೊರಟು ಹೋದರು.ಇದು ನಿಜಾಮ ಶಾಹಿ ಮತ್ತು ಬ್ರೀಟಿಷರ ವಿರುದ್ಧದ ಹೋರಾಟದ ಮೊದಲ ಹೆಜ್ಜೆಯಾಯಿತು.ಈ ಘಟನೆಯಿಂದ 'ನಿರ್ಮಲ' ಎಂಬ ಊರಿಗೆ ಇವರನ್ನು ವರ್ಗಾವಣೆ ಮಾಡಿದರು. (1918 ರಲ್ಲಿ ನಡೆಸ ಘಟನೆ)

ಸದಾ ವರ್ಗಾವಣೆ ನಿಜಾಮನ ಕಿರುಕುಳ ತಾಳಲಾರದೆ ಅವರು ತಮ್ಮ ಹುದ್ದೆಗೆ ರಾಜಿನಾಮೆ ನೀಡಿ ವಕೀಲನಾದ ಪಿ.ಕಿಸನ್‌ರಾವ್ ಅಬ್ಕಾರಿ ಗುತ್ತೆದಾರರಾದ ಅಬ್ದುಲ್ ಕರೀಮರೊಂದಿಗೆ ಸೇರಿ 1920ರಲ್ಲಿ ಹಮ್ದರ್ದ್ ಶಾಲೆಯನ್ನು ಸ್ಥಾಪಿಸಿದರು.ಅವರೇ ಅಧ್ಯಾಪಕ–ಪ್ರಾಚಾರ್ಯ ಗುಮಾಸ್ತ, ಆಗಿ ಎಲ್ಲಾ ಕೆಲಸ ಕಾರ್ಯವನ್ನು ನಿರ್ವಹಿಸತೊಡಗಿದರು.ಈ ಶಾಲೆಯಲ್ಲಿ ಕನ್ನಡ ಕಡ್ಡಾಯವಾಗಿತ್ತು.ಜನರ ಒಡೇತನ, ಅಜ್ಞಾನ, ಜಾತಿಯತೆ ಶೋಷಣೆ ಇವೆಲ್ಲವುಗಳಿಂದ ತುಂಬಿದ ನಿಜಾಮ ಸರಕಾರ, ಜಲಿಯನ್ ವಾಲಾಬಾಗ್ ಕರ್ಮಕಾಂಡಕ್ಕೆ ಕಾರಣವಾದ "ಜನರಲ್ ಡೈಯರಿಗೆ ಹೋಲಿಸಿ ಡಾಯರ್ ಆಫ್ ನಿಜಾಮ ಸ್ಟೇಟ್" ಎಂಬ ಲೇಖನ ಬರೆದರು ಈ ಕಾರಣದಿಂದ ಇವರನ್ನು ಸಂಸ್ಥಾನದಿಂದ 'ಗಡಿಪಾರು' ಮಾಡಿದರು.

ಗಡಿಪಾರದ ಪಂಡಿತರು ತುಂಗಾಭದ್ರ ತಿರದಲ್ಲಿ 'ಪ್ರೇಮಾಯೆತನ' ಎಂಬ ಹೆಸರಿನಲ್ಲಿ ಆಶ್ರಮ ಸ್ಥಾಪಿಸಿ, ಅಲ್ಲಿ ಯೋಗ, ಆದ್ಯಾತ್ಮ ಚಿಂತನೆ, ದೇಶಪ್ರೇಮ, ವೈದ್ಯಕೀಯ ಸೇವೆ, ಮುಂತಾದ ಚಟುವಟಿಕೆಗಳು ಆರಂಭವಾದವು. ಇದಕ್ಕೆ ಪ್ರೇಮಾ ಮೆಡಿಕಲ್ ಕಾಲೇಜೆಂದು ನಾಮಕಾರಣ ಮಾಡಿದರು.ಫ್ರಾನ್ಸ್, ಪೋಲೆಂಡ, ಅಮೇರಿಕಾ, ಇಂಗ್ಲೆಂಡ್ ಹೀಗೆ ಅನೇಕ ದೇಶದ ವಿದ್ವಾಂಸರು, ವೈದ್ಯರು, ಚಿಂತಕರು, ರೋಗಿಗಳು

ಬಂದು ಹೋದರು.ಇಷ್ಟಲ್ಲದೆ ಅನೇಕ ರಾಜಕೀಯ ವಿಚಾರಗಳಲ್ಲಿ ತಮ್ಮ ತೊಡಗಿಸಿಕೊಂಡು ಬ್ರೀಟಿಷರ ವಿರುದ್ಧ ಲೇಖನಗಳನ್ನು ಬರೆಯುತ್ತಾ ಬಂದರು.ಇವರದು ಬಹುಮುಖ ವ್ಯಕ್ತಿತ್ವ 31–10–1942 ರಂದು ಅಸ್ತಂಗತರಾದರು.

### ಡಾ.ಬಿ.ಜಿ. ದೇಶಪಾಂಡೆ

ವೃತ್ತಿಯಲ್ಲಿ ವೈದ್ಯರಾಗಿದ್ದರೂ ದೇಶಪ್ರೇಮ ಇವರಲ್ಲಿತ್ತು ಖಾದಿ ಪ್ರಚಾರ ಮಾಡುತ್ತ ಸ್ವತಂತ್ರ್ಯ ಹೋರಾಟಗಾರರಿಗೆ ಆಹಾರ ಪೂರೈಕೆ ಮಾಡುವುದಲ್ಲದೆ ಆಶ್ರಯ ನೀಡುತ್ತಿದ್ದರು.ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಜೇಲುವಾಸ ಅನುಭವಿಸಿ ಬಿಡುಗಡೆಯಾದರು.ಖಾದಿ ಪ್ರಚಾರಕರು ಹಾಗೂ ಕರ್ನಾಟಕ ಸಂಘದ ಸ್ಥಾಪಕರಲ್ಲಿ ಒಬ್ಬರು.ನಿಜಾಂ ಕರ್ನಾಟಕ ಪರಿಷತ್ತು ಪ್ರಾರಂಬಿಸುವಲ್ಲಿ ಇವರ ಪಾತ್ರ ಬಹಳ ದೊಡ್ಡದು.ವೈದ್ಯರಾಗಿ ರೋಗಿಗಳ ಸೇವೆಯ ಜೊತೆಯಲ್ಲಿ ದೇಶಪ್ರೇಮಿ ಹೈದ್ರಾಬಾದ ಕರ್ನಾಟಕ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಹಚ್ಚುತ್ತಿದ್ದರು.

### ಜನಾರ್ಧನರಾವ ದೇಸಾಯಿ

ದಿನಾಂಕ 28–02–1892 ರಲ್ಲಿ ಸಿಂಧನೂರು ತಾಲೂಕಿನ ವಲ್ಕಂದಿನ್ನಿಯಲ್ಲಿ ಜನಿಸಿದ ಇವರು ಹುಟ್ಟು ಹೋರಾಟಗಾರರು.ಕಲಬುರ್ಗಿಯಲ್ಲಿ ವಕೀಲ ವೃತ್ತಿ ಮಾಡುತ್ತಾ ಅನೇಕ ಸಮಾಜಪರ ಕಾರ್ಯಗಳನ್ನು ಮಾಡಿದ್ದಾರೆ.ಕಲಬುರ್ಗಿಯ ಪ್ರತಿಷ್ಠಿತ ನೂತನ ವಿದ್ಯಾಲಯದ ಕಾರ್ಯದರ್ಶಿಯಾಗಿ ಜೊತೆಗೆ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಿದ ಅಧಿವೇಶನದಲ್ಲಿ ಬಾಲಗಂಗಾಧರ ತಿಲಕರೊಂದಿಗೆ ಪ್ರತಿನಿಧಿಯಾಗಿ ಭಾಗವಹಿಸಿದರು.ರಾಜ್ಯ ಕಾಂಗ್ರೇಸ್ ಸದಸ್ಯರಾಗಿ ಹರಿಪುರ ಕಾಂಗ್ರೇಸ್ ಅಧಿವೇಶನದಲ್ಲಿ ಭಾಗವಹಿಸಿದ್ದವರು.

ಹೈದ್ರಾಬಾದ ಕರ್ನಾಟಕದ ಮುಖಂಡರಾಗಿ ರಾಜಕೀಯ ಜಾಗೃತಿಯನ್ನು ಮೂಡಿಸಿದವರು. ರಾಯಚೂರು, ಬಿದರ, ಕಲಬುರಗಿ ಜಿಲ್ಲೆಯ ವಕೀಲರನ್ನು, ಶಿಕ್ಷಕರನ್ನು ಹಾಗೂ ಬೇರೆ ಬೇರೆ ಜನನಾಯಕರನ್ನು ಭೇಟಿಯಾಗಿ ಸ್ವಾತಂತ್ರ್ಯ ಕಿಚ್ಚು ಹಚ್ಚಿದವರು. ಜನರ ಸಹಕಾರದಿಂದ 1934ರಲ್ಲಿ 'ನಿಜಾಮ ಕರ್ನಾಟಕ ಪರಿಷತ್ತ'ನ್ನು ಸ್ಥಾಪಿಸಿ ಅಪರ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದವರು. 1940ರಲ್ಲಿ ಬೀದರನಲ್ಲಿ ಜರುಗಿದ ಜನಾರ್ಧನರಾವ ದೇಸಾಯಿಯವರ ಅಧ್ಯಕ್ಷತೆಯಲ್ಲಿ ನಡೆದ ಎರಡನೇ ನಿಜಾಮ ಕರ್ನಾಟಕ ಪರಿಷತ್ ಪೂರ್ವ ಸಭೆಯಲ್ಲಿ 'ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನಿಟ್ಟರು.ಹೈದ್ರಾಬಾದ ರಾಜ್ಯ ಕಾಂಗ್ರೇಸ್‌ನಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ಅನೇಕ ಜವಬ್ದಾರಿಗಳನ್ನು ನಿರ್ವಹಿಸಿದವರು.ನಿಜಾಂ ಸರ್ಕಾರ ಕಾಂಗ್ರೇಸ್‌ನ್ನು ನಿಷೇಧಿಸಿದಾಗ ಅವರ ವಿರುದ್ಧ ಧ್ವನಿ ಎತ್ತಿ ಚಳುವಳಿ ಆರಂಭಿಸಿದರು.1947ರ ಜುಲೈ 17 ರಂದು ರಾಜ್ಯ ಕಾಂಗ್ರೇಸ್ ಅಸಹಕಾರ ಚಳುವಳಿ ಪ್ರಾರಂಭಿಸಿದಾಗ ಅವರ ವಕೀಲತ್ ಸನ್ನದನ್ನು ಪಾಸುಮಾಡಿ ತಮ್ಮ ಜೀವನವನ್ನೆ ಸ್ವಾತಂತ್ರ್ಯ ಚಳುವಳಿಗೆ ಮುಡಿಪಾಗಿಟ್ಟರು.1947ರ ಆಗಸ್ಟ್ 7 ರಂದು ಭಾರತೀಯ ಒಕ್ಕೂಟ ದಿನಾಚರಣೆಯನ್ನು ಹೈದರಾಬಾದ್ ಪ್ರಾಂತದಲ್ಲಿ ಹಮ್ಮಿಕೊಂಡಾಗ ಅವರ ವಿರುದ್ಧ ಹೈದ್ರಾಬಾದ ಸರಕಾರ ವಾರೆಂಟ್ ಹೊರಡಿಸಿತು.ಅದರಿಂದ ರಾಜ್ಯವನ್ನು ಬಿಟ್ಟು ಬಂದರು.ಗದಗ ಕ್ಯಾಂಪನಲ್ಲಿದ್ದಾಗ ರಾಜ್ಯ ಸರ್ಕಾರ ವಿರುದ್ಧ ಹೋರಾಡಿದರು.ರಾಯಚೂರು ಜಿಲ್ಲಾ ಗಡಿಯಲ್ಲಿ ಅನೇಕ ಮೇಲ್ವಿಚಾರಣೆ ಕೈಗೊಂಡರು. ಕೊನೆಗೆ ನಿಜಾಂ ಸರ್ಕಾರ ಅವರ ಮೇಲೆ ಕಂಡಲ್ಲಿ ಗುಂಡಿಕ್ಕುವ ಆದೇಶ ನೀಡಿತ್ತು.ಸ್ವಾತಂತ್ರ್ಯ ನಂತರ ಹೈದರಾಬಾದ ರಾಜ್ಯ ಕಾಂಗ್ರೇಸಿನ ಅಧ್ಯಕ್ಷರಾಗಿ 1954 ರಿಂದ 1960ರ ವರೆಗೆ ಸೇವೆ ಸಲ್ಲಿಸಿದರು.20–03–1975ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು.

### ಅಡವಿರಾವ್ ವೆಂಕಟರಾವ್ ಪಢ್ನವೀಸ್

ಅನ್ನಪೂರ್ಣ ಬಾಯಿ ಮತ್ತು ವೆಂಕಟರಾವ್ ಎಂಬ ದಂಪತಿಗಳ ಉದರಲ್ಲಿ ಜನಿಸಿದ ಸ್ವಾತಂತ್ರ್ಯ ಹೋರಾಟಗಾರ ಅಡವಿರಾವ್ ಮೆಟ್ರಿಕ್ಯೂಲೇಶನ್ ಮುಗಿಸಿದ ಅಡವಿರಾವ್ ಅವರು ಕಲಬುರ್ಗಿಯ ಕಲೆಕ್ಟರ್ ಆಫೀಸನಲ್ಲಿ ಗುಮಾಸ್ತ ಹುದ್ದೆಗೆ ಸೇರಿದರು.ಅನಾರೋಗ್ಯದಿಂದ ನೌಕರಿಬಿಡಬೇಕಾಯಿತು.ಕೆಲಸಬಿಟ್ಟು ಇವರು ಜನರ ಮತ್ತು ಸಮಾಜದತ್ತ ಮುಖಮಾಡಿ ಸಮಾಜ ಸೇವೆಗೆ ಅಣಿಯಾದರು.ಯಾರ ದಾಕ್ಷಿಣ್ಯಕ್ಕೂ ಒಳಗಾಗದೇ ಸತ್ಯವನ್ನು ಕಚ್ಚೆದೆಯಿಂದ ಹೇಳಿದವರು.ಶ್ರೀಮಂತರಾಗಿದ್ದ ಇವರು ವ್ಯಾಪಾರ ಆರಂಭಿಸಿದರು.ಇಪ್ಪತ್ತರಿಂದ ಮೂವತ್ತು ವರ್ಷ ವ್ಯಾಪಾರ ಮಾಡಿ ರಾಯಚೂರಿನಲ್ಲಿ 'ರಾಜೇಂದ್ರ ಗಂಜ' ಸ್ಥಾಪನೆ ಮಾಡಿ ಸ್ಥಳೀಯರ ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟರು.

ಶ್ರೀ ರಮಾನಂದ ತೀರ್ಥರ ಆದರ್ಶಗಳನ್ನು ಒಪ್ಪಿಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಧುಮಿಕಿದರು.ವ್ಯಾಪಾರ ವೃತ್ತಿಯಲ್ಲೂ ಸಾಮಾಜಿಕ ಸಂಘಟನೆಯನ್ನು ಮಾಡಿದರು ಕರ್ನಾಟಕ ಸಂಘ, ಹೈದರಾಬಾದ ಕರ್ನಾಟಕ ನಿಜಾಂ ಪರಿಷತ್ತು–1942 ರಲ್ಲಿ ರಾಯಚೂರಿನಲ್ಲಿ ನಡೆದ ಗೋಲತಾಣಾ ಸತ್ಯಾಗ್ರಹದಲ್ಲಿ ಭಾಗವಹಿಸಿದಲ್ಲದೇ ಅನೇಕ ಸತ್ಯಾಗ್ರಹಗಳನ್ನು ರೂಪಿಸಿದವರು.ಇವರ ಸ್ವಾತಂತ್ರ್ಯ ಹೋರಾಟದ ಫಲವಾಗಿ 1936–37 ಮತ್ತು 1940–41ರಲ್ಲಿ ಎರಡು ಬಾರಿ ಮುಸಲ್ಮಾನರು ಇವರಿಗೆ ಸೇರಿದ ಹರಳೆ ದಾಸ್ತಾನನ್ನು ಸುಟ್ಟು ಹಾಕಿದರು.ಇದರಿಂದ ಎದೆಗುಂದದೆ ಅವರ ಚಳುವಳಿ ಮತ್ತಷ್ಟು ತೀವ್ರತಿಯಲ್ಲಿ ಮಾಡಿದರು. ವಿದೇಶಿ ಉಡುಪುಗಳನ್ನು ತ್ಯೆಜಿಸಿ ಸ್ವದೇಶ ಚಳುವಳಿ ಆರಂಭಿಸಿದರು.

ಬಿಡಾಡಿ ದನಕರುಗಳ ಮೇಲೆ ಮಸಿಯಿಂದ ನಿಜಾಂ ವಿರುದ್ದರ ಘೋಷಣೆಗಳನ್ನು ಬರೆಯುತ್ತಿದ್ದರು.ಇದರ ಪರಿಣಾಮವಾಗಿ ಪೊಲೀಸರು ಇವರನ್ನು ಸೆರೆಮನೆಗೆ ತಳ್ಳಿದ್ದರು.ಆದರೂ ಇವರು ಯುವಕರನ್ನು ಹುರಿದುಂಬಿಸಿ ಚಳುವಳಿ ಮುಂದುವರಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ರಾಯಚೂರು ನಿಜಾಮಶಾಹಿ ಭಾಗವಾಗಿತ್ತು.ಆಗ ಇವರು ರಾಯಚೂರು ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು.ಸಹಜವಾಗಿ ರಜಾಕರರ ದೃಷ್ಟಿ ಇವರ ಮೇಲಿತ್ತು.ಹೇಗಾದರೂ ಇವರನ್ನು ಮಟ್ಟ ಹಾಕುವ ಅವಕಾಶಕ್ಕೆ ಕಾಯುತ್ತಿದ್ದರು.ದಿನಾಂಕ 26–08–1947 ರಂದು ರಜಾಕಾರರೆಲ್ಲರೂ ಇವರ ಮನೆಗೆ ಮುತ್ತಿಗೆ ಹಾಕಿದರು.ಅದೃಷ್ಟವಶಾತ್ ಈ ವಿಷಯ ಮೊದಲೇ ತಿಳಿದ್ದರಿಂದ ಅವರನ್ನು ಮನೆಯಿಂದ ಕಳುಹಿಸಿ, ಆಗಬಹುದಾದ ಅನಾಹುತ ತಪ್ಪಿಸಿದರು.ಅದೇ ದಿನ ಮಧ್ಯಾಹ್ನ ರಜಾಕಾರರು ಗುಡಿಸಲುಗಳನ್ನು ಸುಟ್ಟ ಸುದ್ದಿ ಕೇಳಿ ಸ್ಥಳಕ್ಕೆ ಧಾವಿಸಿದರು ಅಲ್ಲಿ ಅವರನ್ನು ಬಂಧಿಸಿ ಜೇಲಿಗೆ ಕಳುಹಿಸಿದರು.ನಂತರ ರಾಯಚೂರು ಜೇಲಿನಿಂದ ಕಲ್ಬುರ್ಗಿ ಜೇಲಿಗೆ ವರ್ಗಾಯಿಸಿದರು.ಅಲ್ಲಿರುವಾಗಲೇ ಹೈದ್ರಾಬಾದ್ ಸಂಸ್ಥಾನ ಭಾರತದಲ್ಲಿ ವೀಲಿನಗೊಂಡಿತು.ಆಗ ಇವರಿಗೆ ಬಿಡುಗಡೆಯಾಯಿತು.1972ರಲ್ಲಿ ಸ್ವಾತಂತ್ರ್ಯದ ರಜಿತ ಮಹೋತ್ಸವವನ್ನು ಮಹಿಳಾ ಸಮಾಜದಲ್ಲಿ ಆಚರಿಸಿದಾಗ ಇವರನ್ನು ಸನ್ಮಾನಿಸಲಾಯಿತು.ಸೆಪ್ಟೆಂಬರ್ 15, 1981 ರಂದು ಕೊನೆಯುಸಿರೆಳೆದರು.

### ಗುಡಿಹಾಳ ಹನುಮಂತರಾವ

ವಕೀಲರಾಗಿದ್ದ ಇವರು 1934ರಲ್ಲಿ ಅಖಿಲ ಕರ್ನಾಟಕ ಪರಿಷತನ್ನು ರಾಯಚೂರಿನಲ್ಲಿ ಸ್ಥಾಪಿಸಿ 'ಶಾರದಾಕನ್ಯಾಪಾಠಶಾಲೆ' ಆರಂಭಿಸಿದರು.ಶಾರದಾ ಚರಕ ಸಂಘವನ್ನು ಪ್ರಾರಂಭಿಸಿ ಖಾದಿ ಪ್ರಚಾರವನ್ನು ಮಾಡಿದರು.1947 ಆರ್.ಜಿ.ಜೋಷಿ, ದೋಮಕುಂಟಿ ನಾರಾಯಣಪ್ಪ ಅವರೊಂದಿಗೆ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸ ಕಂಡವರು.ನಂತರ ಕಲ್ಬುರ್ಗಿ ಜೇಲಿಗೆ ವರ್ಗಾಹಿಸಲಾಯಿತು. ಹೈದರಾಬಾದ ವಿಮೋಚನೆಯ ಹೋರಾಟದಲ್ಲಿ ಇವರ ಪಾತ್ರ ಬಹಳ ಪ್ರಮುಖ. ಅನೇಕ ತರುಣರನ್ನು ಸಂಘಟಿಸಿ ಪ್ರಚೋದಿಸಿ ಸ್ವಾತಂತ್ರ್ಯ ಹೋರಾಟಕ್ಕೆ ತಂದರು.ಅಪ್ಪಟ ಗಾಂಧಿವಾದಿಯಾದ ಇವರು ಖಾದಿ ಪ್ರಚಾರ ಮಾಡಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿ ಅದರ ಸ್ವಾಗತ ಸಮಿತಿಯ ಅಧ್ಯಕ್ಷರಾದವರು.

### ರಾಮಾಚಾರ್ಯ ಗುರಾಚಾರ್ಯ ಜೋಷಿ

ಅಷ್ಟ ಪಂಡಿತ ತಾರಾನಾಥರ ಅಭಿಮಾನಿ ಇವರು 1908 ರಲ್ಲಿ ರಾಯಚೂರಿನಲ್ಲಿ ಜನಿಸಿದರು.ಇವರ ತಂದೆ ಗುರಾಚಾರ್ಯ ಜೋಷಿ ಅನೇಕ ಸ್ನೇಹಿತರನ್ನು ಒಟ್ಟುಗೂಡಿಸಿ ಸ್ವಾತಂತ್ರ್ಯ ಹೋರಾಟದ ಬೀಜಗಳನ್ನು ಬಿತ್ತುತ್ತಿದ್ದರು. ಹಮದರ್ದ್ ಶಾಲೆಯಲ್ಲಿ ಅಧ್ಯಾಪಕ ವೃತ್ತಿ ಮಾಡುತ್ತಿದ್ದರು. ಗಡಿಪಾರಾದ ತಾರಾನಾಥರ ಪ್ರಮಾಯಿತನ ಆಶ್ರಮದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು.ತಮಿಳುನಾಡಿನಿಂದ ಖಾದಿ ತರಿಸಿ ತೊಡುತ್ತಿದ್ದರು. ವಿಶೇಷ ದಿನಗಳಂದು ಖಾದಿಯನ್ನು ಮನೆಮನೆಗೆ ಹಂಚುತ್ತಿದ್ದರು.ಮಹಾತ್ಮಗಾಂಧಿಯನ್ನು ಬೇರೆ ಆಡಿದ ಇವರು ವಿದೇಶಿ ಫರ್‌ಕ್ಯಾಪನ್ ಎಸೆದು ಸ್ವದೇಶ ದೀಕ್ಷ ಪಡೆದ ಅಪ್ಪಟ ಭಾರತಿಯ.ಕನ್ನಡದ ಸಂಯುಕ್ತ ಕರ್ನಾಟಕ ಪತ್ರಿಕೆಗಳ ವರದಿಗಾರರಾಗಿ ಕೆಲಸ ಮಾಡಿದ್ದಾರೆ.ಅಲ್ಲದೆ ಸ್ವಾತಂತ್ರ್ಯ ಚಳುವಳಿಯ ಲೇಖನಗಳನ್ನು ಪತ್ರಿಕೆಗೆ ಬರೆಯುತ್ತಿದ್ದರು.ಸ್ವಾತಂತ್ರ್ಯ ನಂತರ ಕ್ರಾಂತಿ ಪತ್ರಿಕೆಯ ಸಂಪಾದಕರಾಗಿದ್ದರು.

1928ರಲ್ಲಿ ಕರ್ನಾಟಕ ತರುಣ ಸಂಘವನ್ನು ಸ್ಥಾಪಿಸಿದರು.ಈ ಸಂಘದ ಸದಸ್ಯರಿಂದ ನಿಜಾಮಶಾಹಿಯ ರಜಾಕಾರರ ವಿರುದ್ಧ ಹೋರಾಟ ಆರಂಭಿಸಿದರು.ಪ್ರಜಾಹಿತ ಸಂಘದ ಮೂಲಕ ನಡೆಯುತ್ತಿರುವ 'ಲೇವಿ' ಹೆಸರಿನ ದರೋಡೆಯನ್ನು ವಿರೋದ ಮಾಡಿ ಯಾರಿಗೂ ಲೇವಿ ನೀಡದಂತೆ ಮಾಡಿದರು.ಇದರಿಂದ ಗಡಿಪಾರು ಮಾಡುವ ಹೆದರಿಕೆಯು ಬಂದಿತ್ತು.1947 ಆಗಸ್ಟ್ 7 ರಂದು ಜೋಶಿಯವರು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ತಮ್ಮ ಸ್ನೇಹಿತರಾದ ಗುಡಿಹಾಳ್ ಹನುಮಂತರಾವ್, ದೋಮಕುಂಟಿ ನಾರಾಯಣಪ್ಪನವರೊಂದಿಗೆ ಸತ್ಯಾಗ್ರಹ ಮಾಡಿ ಬಂಧಿತರಾದರು.ಜೇಲಿನಲ್ಲಿ ತಮ್ಮ ಧಾರ್ಮಿಕ ಆಚರಣೆ ಅಡ್ಡಿಯಾದ ಊಟವನ್ನು ತಿರಸ್ಕರಿಸಿದರು. ನಂತರ ಇವರನ್ನು ಕಲಬುರ್ಗಿ ಜೇಲಿಗೆ ಕಳುಹಿಸಿದರು.ಅಲ್ಲಿಯೂ ಉಪವಾಸ ಆಚರಿಸಿದರು.ಇದಕ್ಕೆ ದಂಗು ಬಡೆದರು ಜೇಲಿನ ಅಧಿಕಾರಿಗಳು.19 ದಿನಗಳ ಉಪವಾಸದ ನಂತರ ಜೇಲಿನಿಂದ ಬಿಡುಗಡೆ ಮಾಡಿದರು.ಜೇಲಿನಿಂದ ಬಿಡುಗಡೆ ಹೊಂದಿ ರಾಯಚೂರಿಗೆ ಬರುವೊತ್ತಿಗೆ ಇಲ್ಲಿ ರಜಾಕಾರರ, ಅದೋನಿ, ಬಳ್ಳಾರಿ, ಹೊಸಪೇಟೆ ವಲಸೆಹೊಗಿದ್ದ ರಾ.ಗು.ಜೋಷಿಯವರು ತಾಯಿ ಮತ್ತು ಪತ್ನಿ ಮುಂತಾದವರೂ ಮಂತ್ರಾಲಯದ ಹತ್ತಿರದ ತುಂಗಭದ್ರದಲ್ಲಿದ್ದರು. ಇವರು ಅವರನ್ನೂ ಸೇರಿದರು.

ಕುರಡಿಯಲ್ಲಿರುವ ಜಮೀನಿನಿಂದ ಬರಬೇಕಾದ ಹಣವನ್ನು ತರಲು ಹೋದಾಗ ಮಟಮಾರಿ ರೈಲ್ವೆ ನಿಲ್ದಾಣದಲ್ಲಿ ರಜಾಕಾರರು ಇವರನ್ನು ಬಂಧಿಸಿದರು.15 ದಿನಗಳು ತಮ್ಮ ವಶದಲ್ಲಿರಿಸಿಕೊಂಡು ಬಿಡುಗಡೆ ಮಾಡಿದರು.

ಹೈದ್ರಾಬಾದ್ ಸಂಸ್ಥಾನದ ವಿಮೋಚನೆಯವರೆಗೂ ಇವರ ಹೋರಾಟ ನಿಲ್ಲಲಿಲ್ಲ. 1948 ಸೆಪ್ಟೆಂಬರ್ 17 ರಂದು ಹೈದ್ರಾಬಾದ್ ಸ್ವಾತಂತ್ರ್ಯಗೊಂಡ ನಂತರ ಸಾಹಿತ್ಯ ಕೃಷಿ ಆರಂಭಿಸಿದರು. ಕರ್ನಾಟಕ ಸಂಘ, ರಾಯಚೂರು ಪ್ರಜಾಹಿತ ಸಂಘ, ನಾಗರಿಕ ವೇದಿಕೆ ಕರದಾತರ ಸಂಘ, ನಿಜಾಂ ಕರ್ನಾಟಕ ಪರಿಷತ್, ಜ್ಞಾನವಾಹಿನಿ, ತಿಳುವಿನ ತುತ್ತೂರಿ, ವಾರ್ತಾವಾಹಿನಿ, ವಿಜಯ ತ್ರೈಮಾಸಿಕ, ಕ್ರಾಂತಿ, ಪಾಕ್ಷಿಕ ಮುಂತಾದ ಪತ್ರಿಕೆಗಳಲ್ಲಿ ಕೆಲಸ ಮಾಡಿದರು.

ನಿಜಾಂ ಕರ್ನಾಟಕ, ಹಾಳುಕಾಗದ, ಮೆಚ್ಚುಗೆಯ ಮೆಚ್ಚು, ನಾಡಹಬ್ಬ, ಹೈದ್ರಾಬಾದ್ ಮತ್ತು ಮುಸಲ್ಮಾನರು, ಹೈದ್ರಾಬಾದ್ ಶಾಸನ ಸಭೆ, ಸುಧಾರಣೆ, ನಗರ ಸಂಕೀರ್ತನಗಳು, ಮಾನವನಹಕ್ಕು, ನೆನಪಿನ ಪುಟಗಳು, ಅನುಕಂಪ–ಜನಕಂಪ, ಮದ್ವಮತ–ಯಲೆದ್ವಯರ ಬದರಿ ದಿಗ್ಗಜಯ, ಶ್ರೀಗವಾಯಿ ಕೃಷ್ಣಾಚಾರ್ಯರು, ಕೈಗೊಂಡು ಗುಣ ಶ್ರೀ ಶ್ಯಾಮಸುಂದರ ವಿಠಲದಾಸರು, ರಾಯಚೂರಿನಿಂದ ರಾಮೇಶ್ವರದಾತಿರು, ಸತಿ–ಬ್ರಹ್ಮೋತ್ಸವ ಮುಂತಾದ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದರು.

### ಬಿ.ಹೆಚ್.ಇನಾಂದಾರ

ಹನುಮಂತಾಚಾರ್ಯ ಮತ್ತು ಭೀಮವ್ವನವರ ಮಗನಾಗಿ 08–04–1919ರಲ್ಲಿ ಬದಾಮಿ ತಾಲೂಕಿನ ಢಣಾಕ ಕಿಶೂರಿನಲ್ಲಿ ಜನಿಸಿದರು. ಇವರು ಶಾಲಾ ಶಿಕ್ಷಕರಾಗಿದ್ದರು.ಇವರ ಸೋದರಮಾವ ಸಂಗಂ ಹುಚ್ಚಾಚಾರ್ಯ ರಾಯಚೂರಿನ ಹಮ್‌ದರ್ದ್ ಶಾಲೆಯ ಉಪಾಧ್ಯಕ್ಷರಾಗಿದ್ದರು.ಅದರಿಂದ ಇವರ ಶಿಕ್ಷಣ ರಾಯಚೂರಿನಲ್ಲಿ ಆರಂಭವಾಯಿತು. ಹಮದರ್ದ್ ಶಾಲೆ ಹುಟ್ಟಿದ್ದೇ ಸ್ವಾತಂತ್ರ್ಯ ಹೋರಾಟದ ಕಿಚ್ಚಿನಿಂದ. ಕಾರಣ ಆ ಶಾಲೆಯ ಶಿಕ್ಷಕರು–ವಿದ್ಯಾರ್ಥಿಗಳು ಸ್ವಯಂ ಘೋಷಿತರಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮಿಕಿದರು. ಇದಕ್ಕೆ ಇನಾಂದಾರ ಹೊರತಾದವರಲ್ಲಿ.ಬಿಂದುಚಾರ್ಯರು 1938 ಹೆಚ್.ಎಸ್.ಸಿ.ಮುಗಿಸಿ ಜಿ.ಕೆ.ಪ್ರಾಣೇಶಾಚಾರ್ಯರ ಮೂಲಕ ಹೈದರಾಬಾದಿಗೆ ತೆರಳಿ ಕಾಂಗ್ರೆಸ್ ಕಾರ್ಯಾಲಯದಲ್ಲಿ ಬೆರಳಚ್ಚುಗಾರರಾಗಿ ಸೇವೆಗೆ ಸೇರಿದರು.ಬಿಡುವಿನ ಸಮಯದಲ್ಲಿ ಖಾದಿಬಟ್ಟೆ ನೆಯ್ಯುವುದು ಪ್ರಚಾರ ಮಾಡುವುದು ಜನತೆಯಲ್ಲಿ ಸ್ವಾತಂತ್ರ್ಯ ಜಾಗೃತಿ ಮೂಡಿಸುತ್ತಿದ್ದರು.

ಎಲ್.ಕೆ.ಸರಾಫ, ಅಡಿವೆರಾವ್, ರ.ಗು.ಜೋಷಿ, ವೀರಣ್ಣ ಮಾಸ್ತರ್ ಗುಡಿಹಾಳ ಹನುಮಂತ ಇನ್ನು ಅನೇಕ ಸ್ನೇಹಿತರೊಡಗುಡಿ ಗಣೇಶೋತ್ಸವ ನಾಡಹಬ್ಬಗಳ ಸಂದರ್ಭದಲ್ಲಿ ಸ್ವಾತಂತ್ರ್ಯ ಅರಿವು ಮೂಡಿಸುವುದು, ಖಾದಿ ಅರಿವು ಮೂಡಿಸುವುದು, ಪಕ್ಕದ ಹಳ್ಳಿ ದಿನ್ನಿಯಲ್ಲಿ 'ಖಾದಿ ಉತ್ಪಾಧನೆ'ಯ ಕೇಂದ್ರವೊಂದನ್ನು ತೆರೆದರು.

ರಾಯಚೂರಿನಲ್ಲಿ ಪ್ರಜಾಹಿತ ಸಂಘದ ಮೂಲಕ ರಾ.ಗು.ಜೋಷಿ ಯವರೊಡಗೂಡಿ ಸರಕಾರ ಪಡೆಯುತ್ತಿರುವ ಲೇವಿ ಕಂದಾಯದ ವಿರುದ್ಧ ಜನ ಜಾಗೃತಿಯನ್ನುಂಟು ಮಾಡಿದರು. 1947 ಆಗಸ್ಟ್ 15 ರಂದು ಮನೆಮನೆಗೆ ರಾಷ್ಟ್ರಧ್ವಜವನ್ನು ನೀಡಿ ಆರಿಸುವಂತೆ ಪ್ರಚೋದಿಸಿದರು.1947 ಅಕ್ಟೋಬರ್ 2 ರಂದು ಅರೆಸ್ಟ್‌ವಾರೆಂಟು ಜಾರಿಯಾದಾಗ ತಪ್ಪಿಸಿಕೊಂಡು ಮಂತ್ರಾಲಯ ಸೇರಿದರು.ರಾಯಚೂರು ಸರಹದ್ದಿನಲ್ಲಿ ತುಂಗಾಭದ್ರ ಹಾಗೂ ಚಳ್ಳಕೂಡ್ಲೂರು ಶಿಬಿರಗಳು ಸ್ಥಾಪಿಸಿದ್ದರು. ಆ ಶಿಬಿರಗಳಲ್ಲಿ ತರಬೇತಿ ಹೊಂದಿರುವ ಯುವಕರ ತಂಡಗಳನ್ನು ರಚಿಸಿ ಅವರ ರಕ್ಷಣೆ ಹಾಗೂ ಹೋರಾಟಕ್ಕಾಗಿ ಕೈಬಾಂಬು, ಬಂದೂಕು, ಮದ್ದುಗುಂಡುಗಳನ್ನು ಸರಬರಾಜು ಮಾಡಿದ ಕೀರ್ತಿ ಇನಾಂದಾರರಿಗೆ ಸಲ್ಲುತ್ತದೆ.1948 ಸೆಪ್ಟೆಂಬರ್ 17 ರಂದು ಹೈದ್ರಾಬಾದ್ ಭಾರತಕ್ಕೆ ಸೇರಿದಾಗ ತಮ್ಮಲ್ಲಿಯ ಎಲ್ಲಾ ಶಸ್ತ್ರಾಸ್ತ್ರಗಳನ್ನು ಮಿಲಿಟರಿ ಅಧಿಕಾರಿಗಳಿಗೆ ನೀಡಿದ ದೊಡ್ಡಗುಣದ ಮನುಷ್ಯ.ಗದ್ವಾಲ, ಕೆಂಭಾವಿ, ತಾವರಗೇರಾಗಳಲ್ಲಿ ಖಾದಿ ಭಂಡಾರ ಕೇಂದ್ರಗಳನ್ನು ತೆರೆದರು.

**ಡಾ. ಎಂ. ನಾಗಪ್ಪ**

ಬಸಪ್ಪ ತಿಪ್ಪಾರೆಡ್ಡಿ ಮತ್ತು ಈರಮ್ಮ ಎಂಬ ದಂಪತಿಗಳ ಉದರದಲ್ಲಿ 03–10–1927 ರಂದು ರಾಯಚೂರು ತಾಲೂಕಿನ ಮಟಮಾರಿ ಗ್ರಾಮದಲ್ಲಿ ಜನ್ಮತಾಳಿದರು.ತುಂಬಾ ಬಡತನದ ಕುಟುಂಬ ಇವರದು.1946ರಲ್ಲಿ ಪ್ರೌಢ ಶಿಕ್ಷಣ ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ಕಲ್ಬುರ್ಗಿಯ ಸರಕಾರಿ ಕಾಲೇಜಿಗೆ ಇಂಟರ್ಮೀಡಿಯೇಟ ಪ್ರಾರಂಭಿಸಿದರು.ಇವರು ಮೊದಲ ವರ್ಷದಲ್ಲಿರುವಾಗ ಸ್ವಾತಂತ್ರ್ಯ ಹೋರಾಟ ತೀವ್ರ ಸ್ವರೂಪ ಪಡೆದಿತ್ತು.1947ರಲ್ಲಿ ಕಾಲೇಜನ್ನು ತೊರೆದು ಚಳುವಳಿಗೆ ಧುಮುಕಿದರು.ಲೂಹಿಯಾ ಪ್ರಭಾವಕ್ಕೆ ಒಳಗಾದ ಇವರು ಸಮಾಜದ ಅನಿಷ್ಟಗಳ ವಿರುದ್ಧ ಧ್ವನಿಯತ್ತಿದವರು. ಹಪ್ತೆ–ಲೇವಿ ಕೇಳಬಂದ ಅಧಿಕಾರಿಗಳಿಗೆ ಒನಕೆ ಏಟಿನ ರುಚಿ ತೋರಿಸಿದರು. ಸಾಮ್ರಾಜ್ಯಶಾಹಿ ಮತ್ತು ಶೋಷಣೆ ನಿಲುವುಗಳ ವಿರುದ್ಧ ಹೋರಾಟ ಮಾಡುತ್ತ ಬಂದರು. ಪ್ರಾಣದ ಹಂಗು ತೊರೆದು 1947 ಆಗಸ್ಟ್ 15 ರಂದು ರಾಯಚೂರು ಸಾಥ್ ಕಛೇರಿಯ ಮೇಲಿದ್ದ ನಿಜಾಂ ಧ್ವಜ ಕಿತ್ತೆಸೆದು ಭಾರತ ಧ್ವಜ ಹಾರಿಸಿದ ಕೆಚ್ಚೆದೆಯ ಧೀಮಂತ ವ್ಯಕ್ತಿ ಡಾ.ಎಂ.ನಾಗಪ್ಪ ನಂತರ ತುಂಗಭಾದ್ರಾ ಶಿಬಿರ ಸೇರಿದ ಇವರನ್ನು ರಜಾಕಾರರು ಹಿಡಿಯಲು ಬಂದಾಗ ತಪ್ಪಿಸಿಕೊಳ್ಳಲು ತುಂಬಿದ ನದಿಗೆ ಹಾರಿದವರು. ಅವರು ರಜಾಕರರ ಗುಂಡಿಗೆ ಪ್ರತಿರೋದ ಒಡ್ಡಿದವರು.

ಹೆಡಗಿನಾಳ ಗ್ರಾಮದಲ್ಲಿ ಹಪ್ತೆ–ಲೇವಿ ವಸೂಲಾತಿಗಾಗಿ ಬಂದ ಅಧಿಕಾರಿ ಮದನಸಿಂಗನನ್ನು ಓಡಿಸಲು ಬಾಂಬುಸಿಡಿಸಿದವರು, ಎಡಿವಾಳದ ಕರೋಡಗಿರಿ ನಾಕಕ್ಕೆ ಬೆಂಕಿಯಿಟ್ಟಿದ್ದು, ರಾಯಚೂರು ಪಂಪಹೌಸಿಗೆ ದಾಳಿಮಾಡಿ ಪೊಲೀಸರ ಕೈಗೆ ಸಿಕ್ಕು ಜೈಲುವಾಸ ಅನುಭವಿಸಿದ್ದು, ಯರಗೇರಾ ಪೊಲೀಸ್ ಠಾಣೆ ಸ್ಫೋಟಿಸಲು ಹೋಗುತ್ತಿರುವಾಗ ನಾಗಡದಿನ್ನಿಯೇ ಭಾರತ ಸರ್ಕಾರದ ಪೊಲೀಸರಿಂದ ಉಗ್ರಕಮುನಿಷ್ಟರೆಂದು ಬಂಧನಕ್ಕೊಳಗಾಗಿ ಜೈಲು ಸೇರಿದರು. ಕೆಲ ಗೆಳೆಯರ ಗುಂಪು ಕಟ್ಟಿಕೊಂಡು ನಿಜಾಮ ಸರಕಾರದ ವಿರುದ್ಧ ಹೊರಾಟ ಮಾಡಿದವರು.

ಸರ್ಕಾರಿ ಪತ್ರಗಳ ನಾಶ, ಸುಂಕದ ಕಟ್ಟೆಗಳ ಮೇಲೆ ದಾಳಿ ಶಶಸ್ತ್ರ ರಜಾಕಾರರಿಗೆ ಶಸ್ತ್ರಾಸ್ತ್ರಗಳಿಂದಲೇ ಉತ್ತರ ನೀಡಿದವರು.ಇವರ ಯೋಚನೆ ಮತ್ತು ಯೋಜನೆಗಳು ಅಚ್ಚುಕಟ್ಟಾಗಿರುತ್ತಿದ್ದರು.ಶಸ್ತ್ರಗಳಿಲ್ಲದ ಹೋರಾಟ ವ್ಯರ್ಥವೆಂದರಿತ ಇವರು ಬಾಂಬ ತಯಾರಿಕೆಯ ತರಬೇತಿಗೆ ಸೊಲ್ಲಾಪುರಕ್ಕೆ ಹೋದರು ಅಲ್ಲಿ ಆನಂದಗಲ್ ವೆಂಕೋಬಾರಾಯರು ಇವರ ಜೊತೆಗಾರರಾದರು.ಇವರೆಲ್ಲರ ಒಂದು ವಿಶೇಷತೆ ಎಂದರೆ ಸಮಯ ಪ್ರಜ್ಞೆ ಮತ್ತು ಹಿಡಿದ ಕಾರ್ಯದ ಬಗ್ಗೆ ಅವರಿಗಿರುವ ಗೌರವ ನಿಷ್ಠೆ ಇವರ ಹೋರಾಟದ ಗುಟ್ಟುಗಳು.ಇಂತಹ ಹೋರಾಟದ ನಂತರ ಇವರು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದರು ಆಗ ಇವರಿಗೆ ತಹಸಿಲ್ದಾರ ಹುದ್ದೆ ಅರಸಿ ಬಂದಿತ್ತು.ಆದರೆ ಅದನ್ನು ತಿರಸ್ಕರಿಸಿ ಸ್ವತಂತ್ರ್ಯವಾಗಿರಲು ಬಯಸಿದರು.1958ರಲ್ಲಿ ಕಾನೂನು ಪದವಿ ಪಡೆದು ವಕೀಲ ವೃತ್ತಿ ಆರಂಭಿಸಿದರು.ಆಗಾಗಲೇ ಇವರು ರಾಯಚೂರು ಪುರಸಭೆಯ ಸದಸ್ಯರಾಗಿದ್ದರು.

ಸಮಾಜವಾದಿಯಾದ ಇವರು ಗಂಗಾವತಿ ತಾಲೂಕಿನ ನವಲಿ ಗ್ರಾಮದಲ್ಲಿದ್ದ ಸರ್ಕಾರಿ ಭೂಮಿಯನ್ನು ಕಬ್ಜಾ ಮಾಡಿಕೊಂಡು ಭೂರಹಿತ ರೈತರಿಗೆ ಹಂಚಿಕೆ ಮಾಡಿ ಕ್ರಾಂತಿ ಮಾಡಿದವರು.ಕುಲಕರ್ಣಿಯಿಂದಿಡಿದು ಕೋರ್ಟಿನವರಿಗೆ ಓಡಾಡಿ ಪೊಲೀಸರ ದುರವರ್ತನೆಯನ್ನು ಎದುರಿಸಿ ಕಾರ್ಯ ಸಾಧಿಸಿದವರು. ಲೋಹಿಯವರ ತತ್ವ ನಿಷ್ಠ–ಸಿದ್ಧಾಂತಕ್ಕೆ ಮಾರು ಹೋದ ಇವರು ಸಂಯುಕ್ತ ಸೊಸಿಯಾಲಿಸ್ಟ್ ಪಾರ್ಟಿ(ಎಸ್.ಎಸ್.ಟಿ)ಯನ್ನು ಕಟ್ಟಿದರು. 1971 ರಿಂದ ತಾರಾನಾಥ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿ ಉಸಿರಿರುವ ವರೆಗೂ ಶಿಕ್ಷಣ ಸೇವೆ ಮಾಡಿದ್ದಾರೆ.

1967 ರಲ್ಲಿ ರಾಯಚೂರು ಮತಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರು.ಅನಾರೋಗ್ಯದಿಂದ ಶಾಂತವೇರಿ ಗೋಪಾಲ ಗೌಡರು ವಿಧಾನಸಭೆಯಲ್ಲಿ ಇಲ್ಲದಿರುವಾಗ ಅವರ ಜಾಗವನ್ನು ತುಂಬಿಕೊಟ್ಟ ಅಪರೂಪದ ರಾಜಕರಣಿ ಆ ಕಾರಣಕ್ಕೆ ಕರ್ನಾಟಕ ಸರಕಾರ ಇವರನ್ನು ಉತ್ತಮ ಸಂಸದೀಯ ಪಟು ಎಂದು 2002 ರಲ್ಲಿ ಘೋಷಣೆ ಮಾಡಿತು.

ಎಂ.ನಾಗಪ್ಪನವರನ್ನು ರಾಯಚೂರು ಜನತೆ ಪ್ರಮುಖವಾಗಿ ಕಂಡದ್ದು ಒಬ್ಬ ಶ್ರೇಷ್ಠ ವಕೀಲರಾಗಿ, ವಕೀಲರಾಗಿ ಜಾಡಮಾಲಿಗಳ ಸೌಕರ್ಯಕ್ಕಾಗಿ, ಹಟ್ಟಿ ಚಿನ್ನದಗಣಿ, ಕಲ್ಬುರ್ಗಿ ಎಮ್.ಎಸ್.ಕೆ.ಮಿಲ್ ಕಾರ್ಮಿಕರ ಬೇಡಿಕೆ ಪರ, ಹಮಾಲ ಸಂಘದ ಅಧ್ಯಕ್ಷರಾಗಿ, ಪುರಸಭೆ ನೌಕರರ ಸಂಘದ ಅಧ್ಯಕ್ಷರಾಗಿ, ಗಂಜಿನ ಗುಮಾಸ್ತರ ಸಂಘದ ಅಧ್ಯಕ್ಷರಾಗಿ, ರಾಯಚೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ವಿವಿಧ ಕ್ಷೇತ್ರದ, ವಿವಿಧ ಬೇಡಿಕೆ–ಸೌಲಭ್ಯ–ವೈಚಾರಿಕವಾಗಿ–ಸಮಾಜಮುಖಿಯಾಗಿ ನಿರಂತರ ಶ್ರಮಿಸಿದ ಇವರನ್ನು ಗುರುತಿಸಿದ ಗುಲ್ಬರ್ಗಾ ವಿಶ್ವವಿದ್ಯಾಲಯ ಕಲಬುರ್ಗಿಯು 2007ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

'ರಾಯಚೂರು ಜಿಲ್ಲೆಯ ಸಾಂಸ್ಕೃತಿಕ ಸಂಪತ್ತು' ಎಂ.ನಾಗಪ್ಪನವರು. ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಭಾರತ ಸೇವಾದಳ ಗಾಲಿಬ್ ಮೆಮೊರಿಯಲ್ ಟ್ರಸ್ಟ್, ಉರ್ದು ಅಕಾಡಮಿ, ಕರ್ನಾಟಕ ಇತಿಹಾಸ ಅಕಾಡೆಮಿ ಹೀಗೆ ಹತ್ತು ಹಲವು ಸಂಸ್ಥೆಗಳಿಗೆ ಅಧ್ಯಕ್ಷರಾಗಿ ಸಮಾಜ ಪರ ಕಾರ್ಯಗಳನ್ನು ಮಾಡಿದ್ದಾರೆ.

1980 ರಲ್ಲಿ ಭಾರತೀಯ ವಕೀಲರ ನಿಯೋಗದ ಸದಸ್ಯರಾಗಿ ಇಟಲಿ, ಜರ್ಮನ್, ಫ್ರಾನ್ಸ್, ಸ್ವಿಡ್ಜರಲ್ಯಾಂಡ್, ಇಂಗ್ಲೆಂಡ್ ಮುಂತಾದ ದೇಶಗಳಿಗೆ ಭೇಟಿ ಕೊಟ್ಟಿದ್ದಾರೆ.ಯುಗೋಸ್ಲೋವಿಯಾದ ಬೆಲ್ಗ್ರೇಡಿನಲ್ಲಿ ಇಂಟರ್‌ನ್ಯಾಷನಲ್ ಇಕಾನಾಮಿಕ್ ಆರ್ಡರ್ ವಿಷಯದ ಮೇಲೆ

ವಿದ್ವತ್‌ಪೂರ್ವ ಪ್ರಬಂಧವನ್ನು ಮಂಡಿಸಿದರು. ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಆಯೋಜಿಸಿದ ಸಮ್ಮೇಳನದಲ್ಲಿ "21ನೇ ಶತಮಾನದ ಉನ್ನತ ಶಿಕ್ಷಣದ ಸವಾಲುಗಳು" ವಿಷಯ ಚಿಂತನ ಶೀಲ ಪ್ರಬಂಧವನ್ನು ಮಂಡಿಸಿದ್ದಾರೆ.

ಆರಂಭದಲ್ಲಿ ಲೋಹಿಯಾ ವಾದ–ಸಿದ್ಧಾಂತ–ತತ್ತ್ವಗಳನ್ನು ಮನಸಾರೆ ಒಪ್ಪಿ ಅದನ್ನು ಪಾಲಿಸುತ್ತಾ ಬಂದರೂ, ಆನಂತರ ಶರಣರ ಅಧ್ಯಯನದಿಂದ ಲೋಹಿಯಾ ತತ್ತ್ವಗಳು ಇಲ್ಲಿವೇ ಎಂದು ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಶರಣರ ಚಿಂತನಗಳನ್ನು 'ಶರಣ ಚಿಂತನ' ಎಂಬ ಕಾರ್ಯಕ್ರಮದ ಮೂಲಕ ಮನೆ ಮನೆಗೆ ಶರಣರ ತತ್ತ್ವ–ಆದರ್ಶ–ಚಿಂತನೆಗಳನ್ನು ಹಂಚಿದರು. ಇವರ ಬದುಕು ಇಂದಿನ ಯುವ ಪಿಳಿಗೆಗೆ ಮಾದರಿ.29–03–2011 ರಂದು ಹೃದಯಾಘಾತದಿಂದ ಲಿಂಗೈಕ್ಯರಾದರು.

### ಶಂಕರಗೌಡ ಬೆಟ್ಟದೂರು

ಬಸವನಗೌಡ ಮತ್ತು ನೀಲಮ್ಮರ ಮಗನಾಗಿ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಬೆಟ್ಟದೂರಿನಲ್ಲಿ 14–04–1928 ರಂದು ಜನ್ಮತಾಳಿದರು.ಪ್ರಾಮಾಣಿಕ ಬದುಕಿನ ಇವರು ಆ ಕಾಲದಲ್ಲಿ ಕಂದಾಯವನ್ನು ಸಂಗ್ರಹಮಾಡಿ ಕಂದಾಯ ಅಧಿಕಾರಿಗಳಿಗೆ ನೀಡುತ್ತಿದ್ದರು.ಆ ಸಂದರ್ಭದಲ್ಲಿ ಅವರಿಗೆ ಲಂಚ ಕೊಡಬೇಕಾಗಿತ್ತು.ಆದರೆ ಇವರು ಸಂಗ್ರಹಿಸಿದ ಹಣವನ್ನು ಅವರಿಗೆ ಕೊಟ್ಟು ನಾನು ಏನನ್ನೂ ಕೊಡಲು ಆಗುವುದಿಲ್ಲ ಬೇಕಾದರೆ ಜಮಾ ಮಾಡಿಕೊಳ್ಳಿ ಇಲ್ಲವೇ ಬಿಡಿ ಎಂದು ಹಣದ ಗಂಟನ್ನು ಎಸೆದು ಹೋದವರು.ಚಳ್ಳಿ ಕೂಡ್ಲೂರು ಶಿಬಿರಾಧಿಪತಿಯಾಗಿ ಅನೇಕ ಯುವಕರಿಗೆ ಹೋರಾಟದ ದಾರಿಗಳನ್ನು ತೋರಿಸಿದವರು.ವಿದ್ಯಾರ್ಥಿಯಾಗಿದ್ದಾಗಲೆ 'ಭಾರತ ಒಕ್ಕೂಟ ಸೇರಿರಿ' ಎಂದು 1947ರಲ್ಲಿ ಗೆಳೆಯರನ್ನು ಸೇರಿಸಿಕೊಂಡು ನಿಜಾಂರ ವಿರುದ್ಧ ಹೋರಾಟ ಆರಂಭಿಸಿದವರು.ತುಂಗಾಭದ್ರಾ ಕ್ಯಾಂಪಿನಲ್ಲಿದ್ದು ಭೂಗತ ಚಟುವಟಿಕೆಗಳ ಮೂಲಕ ಹೋರಾಟ ತೀವ್ರಗೊಳಿಸಿದವರು. ಹೆಚ್ಚಿನ ತರಬೇತಿಗಾಗಿ ಪರ್ವತರೆಡ್ಡಿಯವರ ಜೊತೆಗೆ ಮದ್ರಾಸ್ ಪ್ರಾಂತದ ಬೆಜವಾಡಕ್ಕೆ ಹೋಗಿ ಯುದ್ಧಕಲೆಯನ್ನು ಕರಗತ ಮಾಡಿಕೊಂಡವರು. ಎಡಿವಾಳದ ಸುಂಕದಕಟ್ಟೆಯ ಸ್ಫೋಟ ಮಾಡುವುದರಲ್ಲಿ ಭಾಗವಹಿಸಿ ಪೊಲೀಸರನ್ನು ಓಡಿಸಿ ಆಯುಧಗಳನ್ನು ವಶಪಡಿಸಿಕೊಂಡರು.ಜಯತೀರ್ಥರಾಜ ಪುರೋಹಿತರ ಆದೇಶದಿಂದ ಆಯನೂರು ಗ್ರಾಮಕ್ಕೆ ಕಂದಾಯ ವಸೂಲಿಗೆ ಆಗಮಿಸಿದ ಕ್ರೂರ ಅಧಿಕಾರಿಗಳನ್ನು ಓಡಿಸಲು ಕೈಬಾಂಬು ಒಗೆದರು. ಮಾನವಿ ಪೋಸ್ಟ್ ಆಫೀಸಿಗೆ ಬೆಂಕಿ ಇಟ್ಟಿದ್ದು ಮ್ಯಾಳೂರು ಘಟನೆಯಲ್ಲಿ ಪೊಲೀಸರಿಂದ ಪಾರಾಗಿ ಬಂದದ್ದು ಯರಗೇರಾ ಪೊಲೀಸರಿಗೆ ಬಾಂಬು ಸಿಡಿಸಲು ಹೊರಟ ಘಟನೆ ಇವರ ಹೋರಾಟದ ಹೆಜ್ಜೆ ಗುರುತಾಗಿವೆ.

ಮದ್ಲಾಪುರು ಕರೋಡಗಿರಿ ಕಛೇರಿ ಸುಟ್ಟಿದ್ದು ಇವರ ಸಾಹಸಕ್ಕೆ ಕೈಗನ್ನಡಿ.ಇವರ ಬುದ್ದಿವಂತಿಕೆ, ಚಾಕಚಕ್ಯತೆ ಹಾಗೂ ಸಮಯ ಪ್ರಜ್ಞೆಯ ಮಾತುಗಳಿಂದ ರಾಜಲಬಂಡಿ ರಸ್ತೆಯಲ್ಲಿ ನಿಜಾಮ ಪೊಲೀಸರ ಕೈಗೆ ಸಿಕ್ಕರೂ ಪಾರಾಗಿ ಬಂದದ್ದು ಒಂದು ಪವಾಡವೇ ಸರಿ.ಅಸಹಕಾರ ಆಂದೋಲನ ಮೂಲಕ ಇಡೀ ನಿಜಾಮ ರಾಜಕೀಯ ವ್ಯವಸ್ಥೆಯನ್ನು, ಆಡಳಿತವನ್ನು ಸಂಪೂರ್ಣವಾಗಿ ನಾಶಮಾಡಿದರು.ಜನರಲ್ಲಿ ಆತ್ಮ ಸ್ಥೈರ್ಯ ತುಂಬಿ ಸೈನ್ಯ ಕಟ್ಟಿದರು. 1944ರಲ್ಲಿ ಮೆಟ್ರಿಕ್ ಪರೀಕ್ಷೆ ಪಾಸಾದರು.ಚಿತ್ರಕಲೆ ಇವರ ಹವ್ಯಾಸವಾಗಿತ್ತು.ಚಿತ್ರಕಲೆಯ ವಿಶೇಷ ಅಧ್ಯಯನಕ್ಕಾಗಿ ಕಲ್ಕತ್ತಕ್ಕೆ ಹೋದರು. ಹೈದ್ರಾಬಾದಿನ ಶಾಂತಿನಿಕೇತನ ಚಿತ್ರಕಲೆ ಶಾಲೆಯಲ್ಲಿ ಅಭ್ಯಾಸ ಮಾಡಿ ಅಲ್ಲಿಯ ಪ್ರಾಚಾರ್ಯರಾದ ಮಲ್ಲಿಕಾರ್ಜುನ ಪ್ರೀತಿಗೆ ಪಾತ್ರರಾಗಿದ್ದರು. ಇವರ ಕಲಾ ಪ್ರತಿಭೆ ಗುರುತಿಸಿ ಪ್ರಾಚಾರ್ಯರಾದ ಮಲ್ಲಿಕಾರ್ಜುನರು ಉನ್ನತ ಅಭ್ಯಾಸಕ್ಕಾಗಿ 4 ವರ್ಷಗಳಿಗಾಗಿ ಅಂತರಾಷ್ಟ್ರೀಯ ಕಲಾವಿದ ನಂದಲಾಲ ಹತ್ತಿರ ಕಳುಹಿಸಿದರು.

ಗಾಂಧಿಜಿ ಸ್ಮಾರಕ ಬಿರ್ಲಾ ಭವನದಲ್ಲಿ ಗಾಂಧೀಜಿಯ ಜೀವನ ಚರಿತ್ರೆಯ ಫ್ರೆಸ್ಕೊ ವಿಧಾನದಲ್ಲಿ ರೂಪಿಸುವುದು ಆಗಿತ್ತು.ಆದರೆ ನಿರ್ಮಾಣಕ್ಕಾಗಿ ಚಿತ್ರ ಕಲಾವಿದರನ್ನು ಹುಡುಕುತ್ತಿದ್ದಾಗ ಇವರ ಕಲೆ ಕಂಡು ಇವರನ್ನು ಆ ಕೆಲಸಕ್ಕೆ ನೇಮಿಸಿದರು.ಜಪಾನಿನ ಪ್ರಸಿದ್ದ ಕಲಾವಿದರೊಂದಿಗೆ ಬಿರ್ಲಾ ಭವನದಲ್ಲಿ ಮೂರು ವರ್ಷ ಕೆಲಸ ಮಾಡಿ ಜಗತ್ತಿನ ಗಮನ ಸೆಳೆದಿದ್ದರು. ಗಾಂಧೀಜಿಯವರ ಆತ್ಮ ಚರಿತ್ರೆಯ ಘಟನೆಗಳನ್ನು ಕಲಾಕೃತಿಗಳನ್ನು ರಚಿಸಿ ಬಹಳ ಪ್ರಸಿದ್ಧರಾದರು.1950ರಲ್ಲಿ ಮದುವೆಯಾದ ಇವರು ಮೂರು ಮಕ್ಕಳಿಗೆ ಜನ್ಮವಿತ್ತರು.1993ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಗೌರವ ಪ್ರಶಸ್ತಿ, 1995ರಲ್ಲಿ 'ರಾಜ್ಯೋತ್ಸವ ಪ್ರಶಸ್ತಿ' 1999ರಲ್ಲಿ ಭಾರತ ಫೈನ್ ಆರ್ಟ್ಸ್ ಎಂಡ ಕ್ರಾಫ್ಟ್ ಸೊಸೈಟಿಯ ಗೌರವ ಪ್ರಶಸ್ತಿಗಳು ಸಂದಿವೆ. ಇಂತಹ ಚೇತನ 22–04–2011ರಲ್ಲಿ ಲಿಂಗೈಕ್ಯರಾದರು.ಇದೊಂದು ತುಂಬಲಾರದ ನಷ್ಟ.

### ಕಾಶಿರಾವ್ ಪಾಟೀಲ್

ಚನ್ನಬಸಪ್ಪ ಮತ್ತು ಚಂಗಲಮ್ಮ ಇವರ ಮಗನಾಗಿ ದಿನಾಂಕ 09–10–1932ರಂದು ಮಾನವಿ ತಾಲೂಕಿನ ವಟಗಲ್‌ನಲ್ಲಿ ಜನಿಸಿದರು.ಇವರು ತಮ್ಮ ಪ್ರಾಥಮಿಕ ಅಭ್ಯಾಸ ವಟಗಲ್‌ನಲ್ಲಿ ಪೂರೈಸಿದರು.ಆಗಾಗ ಇವರ ಮನೆಗೆ ಬರುತ್ತಿದ್ದ ಗಾಣದಾಳ ನಾರಾಯಣಪ್ಪರ ಮಾತುಗಳಿಂದ ಪ್ರಭಾವಕ್ಕೊಳಗಾದ ಇವರು ಚಿಕ್ಕ ವಯಸ್ಸಿನಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು.ಕವಿತಾಳದ ಮುಲ್ಕಾಜಯ್ಯನವರಿಂದ, 'ವಂದೇ ಮಾತರಂ' ಗೀತೆ ಕಲಿತು ಹಾಡಲು ಆರಂಬಿಸಿದರು.ರಾಯಚೂರಿನ ಸರಕಾರಿ ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವಾಗ ಇವರ ಶಿಕ್ಷಕರಾದ ಗಿರಿರಾವ್ ಅವರ ರಾಷ್ಟ್ರನಾರಾಯಣರ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಹೇಳಿದ ಪಾಠಗಳಿಂದ ಪ್ರಭಾವಕ್ಕೊಳಗಾಗಿ ಸಂಘಟನೆ ಆರಂಭಿಸಿದರು. "ಆಜಾದ ಹೈದ್ರಾಬಾದ್ ನಹಿಹೋ" ಸರೌತ್.ಇಂಡಿಯನ್ ಯುನಿಯನ್ ಮೇ ಶರೀಕ್ ಹೋನಾ ಹೀ ಪಡೇಗಾ" ಎಂಬ ಉಕ್ತಿಯೊಂದಿಗೆ ಮೆರವಣಿಗೆ ಹೊರಟಾಗ ಅಕ್ಟೋಬರ್ 2 1947ರಲ್ಲಿ ಅಲ್ಲಿಯ ಪೊಲೀಸರು ಇವರನ್ನು ದಸ್ತಗಿರಿ ಮಾಡಿ ಜೇಲಿಗೆ ಹಟ್ಟಿದರು.ಒಂದು ತಿಂಗಳ ಏಳು ದಿನಗಳು ಜೈಲುವಾಸ ಮಾಡಿ ರೂ.10.00 ರೂಪಾಯಿ ದಂಡ ಕಟ್ಟಿ ಹೊರಬಂದ ನಂತರ ಸಿರುಗುಪ್ಪ, ಆದೋನಿ ಶಿಬಿರಗಳಿಗೆ ತೆರಳಿ ಅಲ್ಲಿ ಕಾರ್ಯ ಆರಂಭಿಸಿದರು.

ಹೈದ್ರಾಬಾದ್ ವಿಮೋಚನೆಯಾದ ಮೇಲೆ ಕಾಶಿರಾವ ಪಾಟೀಲ್ ತಮ್ಮ ಗ್ರಾಮದಲ್ಲಿ ವಟಗಲ್ ದೊಡ್ಡ ಸಭೆಯನ್ನು ಆಯೋಜಿಸಿದರು. ಕವಿತಾಳ ಬಸವೇಶ್ವರ ಜಿನ್ನಿಂಗ್ ಫ್ಯಾಕ್ಟರಿಯಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅಧಿಕಾರಿಗಳನ್ನು ಗೌರವಿಸಿದವರು.

ಹೈದ್ರಾಬಾದ್ ನಿಜಾಮ್ ಕಾಲೇಜಿಗೆ ಸೇರಿದ ಇವರು ಶಿಕ್ಷಣ ಪೂರ್ಣಗೊಳಿಸದೆ ಬಂದು ಚಿಕ್ಕಡಪಲ್ಲಿಯಲ್ಲಿ ಸ್ಯಾನಟರಿ ಇನ್ಸ್‌ಪೆಕ್ಟರ್ ಕೋರ್ಸ್‌ಗೆ ಪ್ರವೇಶ ಪಡೆದು ಕೋರ್ಸ್ ಪೂರ್ಣಗೊಳಿಸಿ 22–02–1954 ರಲ್ಲಿ ಕಲಬುರ್ಗಿಯ ಪುರಸಭೆಯಲ್ಲಿ ಸ್ಯಾನಟರಿ ಹುದ್ದೆಗೆ ಸೇರಿದರು.

ರಾಯಚೂರು, ಬೀದರ್, ಯಾದಗಿರಿ ಮತ್ತು ಚಿಟ್ಟಗುಪ್ಪ ಪಟ್ಟಣಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ 1967 ರಲ್ಲಿ ಕೊಪ್ಪದಲ್ಲಿ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ ಸ್ವಯಂ ನಿವೃತ್ತಿಹೊಂದಿದರು.

ರಾಜನಾಮೆಯ ತರುವಾಯ ಮೇ॥ಸ॥ಕೆ.ಆರ್ ಮತ್ತು ಕಂಪನಿ ಎಂಬ ಹೆಸರಿನಲ್ಲಿ ಸಿವಿಲ್ ಕನ್ಸಸ್ಟ್ರಕ್ಷನ್ ಕಂಪನಿ ಪ್ರಾರಂಭಿಸಿ 'ಪ್ರಥಮ ಶ್ರೇಣಿ ಕಾಂಟ್ರ್ಯಾಕ್ಟರ್' ಎಂಬ ಶ್ರೇಯಸ್ಸು ಪಡೆದರು.

ಕಾಂಟ್ರ್ಯಾಕ್ಟರ್ ಕಾರ್ಯಗಳ ಜೊತೆ–ಜೊತೆಯಲ್ಲಿ ಸಾಮಾಜಿಕ ಸಂಘ ಸಂಸ್ಥೆಗಳ ವಿವಿಧ ಸ್ತರಗಳಲ್ಲಿ ತೊಡಗಿಸಿಕೊಂಡು ರಾಯಚೂರು ನಗರ ಹಾಗೂ ವಿವಿಧ ತಾಲೂಕ ಸ್ವಾತಂತ್ರ್ಯ ಹೋರಾಟಗಾರರ ಸಮಿತಿಯ ಸಂಸ್ಥಾಪಕ ಅಧ್ಯಕ್ಷರಾಗಿ, ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ರಾಯಚೂರು ಕೇಂದ್ರದ ಸಂಸ್ಥಾಪಕ ಅಧ್ಯಕ್ಷರಾಗಿ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರಾಗಿ, ಬಸವ ಸಮಿತಿ ಬೆಂಗಳೂರಿನ ಚುನಾಯಿತ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಲಯನ್ಸ್ ಕ್ಲಬ್ ಸದಸ್ಯರಾಗಿ, ನಗರದ ಪ್ರತಿಷ್ಠಿತಿ ಶಿಕ್ಷಣ ಸಂಸ್ಥೆಯ ಸದಸ್ಯರಾಗಿ, ಅಖಿಲ ಭಾರತ ಸ್ವಾತಂತ್ರ್ಯ ಹೊರಾಟಗಾರರ ಸಮಿತಿ ನ್ಯೂಡೆಲ್ಲಿಯ ಉಪಾಧ್ಯಕ್ಷರಾಗಿ ನಂದವಾಡಗಿ ಏತ ನೀರಾವರಿ ಹೋರಾಟ ಮಾಡುತ್ತ ಬಂದವರು.ದಿನಾಂಕ 28–12–2013 ರಂದು ಲಿಂಗೈಕ್ಯರಾದರು.

## 'ರಾಮು ಮೋಚಿ ಮತ್ತು ಆತನ ಹೆಂಡತಿ ಗೌರಿ'

ರಾಮು ಮೋಚಿ ಯಾವುದೋ ಒಂದು ಕಥೆಗೆ ಶೀರ್ಷಿಕೆಯಾಗಬಹುದಾದ ಜೀವನ ಚರಿತ್ರೆಯವರು, 8ರ ವಯಸ್ಸಿನಲ್ಲಿ ಮೋಚಿವಾಡಾದಲ್ಲಿ ಚಪ್ಪಲಿ ರಿಪೇರಿ ಮಾಡುತ್ತ ಕುಳಿತ ಹುಡುಗನಿಗೆ ರಜಾಕಾರರ ಕಾರ್ಯದ ಭೀಬತ್ಸ ದೃಶ್ಯ ನೋಡಿದ.ಹಿರಿದು ಕತ್ತು ಕತ್ತರಿಸಿದ 3–4 ತಿಂಗಳ ಕೂಸೊಂದು ಸಿಕ್ಕಿಸಿ ರಾಕ್ಷಸನಂತ ಕುಣಿದ ರಜಾಕಾರರನ್ನು ಕಂಡು ಇವರನ್ನು ನಿರ್ಣಾಮ ಮಾಡಬೇಕೆಂದು ಪಣತೊಟ್ಟರು, ಆಗಲೇ ಗಾಣಧಾಳ ನಾರಾಯಣಪ್ಪ ಅಡವಿರಾವ ಫಡ್ನಿವೀಸ್ ರಾ.ಗು.ಜೋಷಿ ಮೊದಲಾದ ಹಿರಿಯ ಹೋರಾಟವನ್ನು ಕಂಡಿದ್ದನು ಕಾಂಗ್ರೇಸ್ಸಿನ ಸೌಮ್ಯದೋರಣೆ ಅವನಿಗೆ ಬಲಹೀನವಾಗಿ ಕಂಡಿತು.ಆರ್ಯ ಸಮಾಜದ ಸದಸ್ಯರು ವಿಶೇಷವಾಗಿ ಕಟುಕರು ತಮ್ಮ ಜೀವದ ಹಂಗುತೊರೆದು ಹೋರಾಡುತ್ತ ಏಟಿಗೆ–ಏಟು ಎನ್ನುವ ಇವರ ತತ್ತ್ವ ಹಿಡಿಸಿತ್ತು.ರಾಮಪುರ, ಆಗಸ್ಟ್ ತಿಂಗಳಲ್ಲಿ ಹರಿಜನರನ್ನು ಮುಸ್ಲಿಂರನ್ನಾಗಿ ಮತಾಂತರ ಮಾಡಿದ್ದು. ನೋಡಿ ಕುದ್ದು ಹೋದನು, ಹಿಂದು ಸ್ತ್ರೀಯರ ಮೇಲೆ ಆಗುತ್ತಿದ್ದ ಅನ್ಯಾಯ ಸಹಿಸದೆ ಆರ್ಯ ಸಮಾಜ ಸೇರಿದ, ರಜಾಕಾರರಿಗೆ ಕಂಡಲ್ಲಿ ಏಟು ಕೊಡಹತ್ತಿದ ಇವರ ನಿರ್ಮೂಲನೆ ಮಾಡಲು ಪಣತೊಟ್ಟು ಅಡವಿ ಅಡವಿ ತಿರುಗಿದ ಒಬ್ಬರೇ ಸಿಕ್ಕಾಗ ಮುಗಿಸಿದ, ತಾನು ಹೊಡೆತ ತಿಂದ, 1947 ರಲ್ಲಿ ಆರ್ಯ ಸಮಾಜ ಯೋಜಿಸಿದ ಹೈದ್ರಾಬಾದ್ ಕಾರ್ಯಕ್ರಮಕ್ಕೆ ಹೋದ, ಜೈ ಹಿಂದ ಎಂದ ವಂದೇ ಮಾತರಂ ಎಂದು ಲಾಟಿ ಏಟಿನ ಮಧ್ಯದಲ್ಲೂ ಭೂದೇವಿಗೆ ನಮಸ್ಕರಿಸುತ್ತಲೆ ಇವರ ಬಂಧನವಾಯಿತು, ಜೈಲು ಸೇರಿದ, ಬಿಡುಗಡೆಯಾದಾಗ ಅವನು ಹಣ್ಣುಗಾಯಿ ನೀರುಗಾಯಿಯಾಗಿದ್ದನು. ಆದರೂ ಹೋರಾಟ ಬಿಡಲಿಲ್ಲ, ರಾಯಚೂರಿಗೆ ಬಂದು ರಜಾಕಾರರ ಮೇಲೆ ದಾಳಿ ಮಾಡಿದ.ಪೊಲೀಸರ ರಜಾಕಾರರ ಹೊಡೆತಗಳಿಗೆ ಇವನು ಸಿಕ್ಕಿಬಿದ್ದು ಜರ್ಜರಿತನಾದನು ಹೈದ್ರಾಬಾದ್ ಸಂಸ್ಥಾನಕ್ಕೆ ಸ್ವಾತಂತ್ರ್ಯ ಬಂತು.ಭಾರತದಲ್ಲಿ ವಿಲೀನವಾಯಿತು ಆದರೆ ಇವನ ಪ್ರಾಣ ಪಕ್ಷಿ ಆಕಾಶದಲ್ಲಿ ತೇಲಿಹೊಯಿತು.ಸ್ವಾತಂತ್ರ್ಯ ಸಿಕ್ಕ ಭರಾಟೆಯಲ್ಲಿ ಇವನನ್ನು ಇವರ ಕುಟುಂಬದವರು ಯಾರು ಗಮನಿಸಲೇ ಇಲ್ಲ. ಇವನ ಹೆಂಡತಿ ಗೌರಿ ಹುಚ್ಚಿಯಾದಳು, ಆರ್ಯಸಮಾಜದ ಡಾ॥ತಿಪ್ಪಾಜಿರಾವ ದೇವಾಜಿರಾವ ಮೊದಲಾದವರ ಮನೆಗೆ ಹೋಗಿ ಕತ್ತಿ ತೆಗೆದುಕೊಂಡು ನಡಿಯಣ್ಣ ಆ ರಜಾಕಾರರನ್ನು ಹೊಡೆಯೋಣ ಎಂದು ಬೀದಿಗೆ ಇಳಿಯುತ್ತಿದ್ದಂತೆ.ಅವಳನ್ನು ಶಾಂತಗೋಳಿಸಲು ಇವರು ತಮ್ಮ ಬುದ್ದಿಯನ್ನೆಲ್ಲ ಖರ್ಚು ಮಾಡುತ್ತಿದ್ದರಂತೆ ಸಾಯುವವರೆಗೂ ರಜಾಕಾರೊಂಸೆ ಹಮ್ ಲಡೇಂಗೆ ಭಾರತ ಮಾತಾಕೋ ಫೂಲ ಚಡಾಯಂಗೆ ಎನ್ನುತ್ತಲೆ ಕೂಳಿಲ್ಲದೆಯೆ ಕೊನೆಗೊಂದು ದಿನ ಹೆಣವಾದಳು.

ಈ ಘಟನೆಯನ್ನು ಡಾ॥ತಿಪ್ಪಾಣಿಯವರು ಉಟ್ಕೂರು ಈಶ್ವರಪ್ಪನವರ ಮನೆಯಲ್ಲಿ ಕಥೆ ಹೇಳಿದ್ದರು, ಇವೆ ಕಥೆಯನ್ನು ದೇವಾಜಿಯವರ ಪುತ್ರ ಆರ್.ಕೆ.ಟೈಲರ್ ಮತ್ತೊಮ್ಮೆ ನೆನಪಿಸಿ ಶ್ರದ್ದಾಂಜಲಿಯ ಕಣ್ಣೀರು ತುಳುಗಿಸಿದವನು ಈ ಕುಟುಂಬಕ್ಕೆ ಹೇಳಿಕೊಳ್ಳಲು ಮಕ್ಕಳಿಲ್ಲ, ಕಥೆ ಬರೆಯಲು ಸಾಹಿತಿಗಳು ಇಲ್ಲ ಆದರೂ ಸ್ವಾತಂತ್ರ್ಯದ ಇತಿಹಾಸದಲ್ಲಿ ಇದೊಂದು ಬೆರಸ್ಥಾಯಿ ಅಳಿಸಲಾಗದ ಪುಟ.

ಈಷ್ಟೆಲ್ಲಾ ಹೋರಾಟದ ಸಂದರ್ಭದಲ್ಲಿ ಈ ಎಲ್ಲಾ ಹೋರಾಟಗಾರರು ತನುಮನಗಳಿಂದ ತಮ್ಮನ್ನು ಸಮರ್ಥಿಸಿಕೊಂಡ ಮಹಾನ್ ಚೇತನಗಳು ಇವರಲ್ಲಿದೆ ಇನ್ನೂ ರಾಯಚೂರು ಜಿಲ್ಲೆಯಾದ್ಯಾಂತ ಅನೇಕ ಹೋರಾಟಗಾರರು ಇದ್ದಾರೆ ಅವರನ್ನು ಈ ಸಂದರ್ಭದಲ್ಲಿ ಹೇಳಲು ಸಾಧ್ಯವಾಗದ ಕಾರಣ ಅವರುಗಳನ್ನು ಈ ಮುಂದೆ ಸ್ಮರಿಸಲಾಗಿದೆ.

## ಎಲ್.ಕೆ. ಸರಾಫ್ ಗಾಣಧಾಳ ನಾರಾಯಣಪ್ಪ:

ಗುರುನಾಥರಾವ್ ಅಪರಂಜಿ–ಕಸಬ ಪಾಂಡುರಂಗರಾವ್.ಜೆ., ಮದ್ವರಾಯರು, ಗಂಗನಗಾರ ನಾಗಣ, ತಿಮ್ಮಾರೆಡ್ಡಿ ಹಂಪಯ್ಯ ಹನುಮಂತರಾವ್, ಪಿ.ವೀರಣ್ಣ ಮಾಣಿಕ್ಸರಾವ್, ಡಿ.ಪಂಪಣ್ಣ ನೆರವಿ, ಗೌರಣ್ಣ, ಮಟಮಾರಿ, ಡಾ॥ದೇವಾಜಿರಾವ್, ಮಾಣಿಕ್ಸರಾವ್ ಮಹಾವೀರಜ, ಡಾ॥ತಿಪ್ಪಜಿರಾವ್ ರಾಮಚಾರಿ, ಸದಾಶಿವಪ್ಪ ಪೂಲಬಾವಿ, ಬಸವರಾಜಪ್ಪ ವಟಗಲ್, ರಾಮಜಿ ನಾಯಕ, ವೆಂಕೋಬರಾವ್ ಇಲ್ಲೂರು ನರಸಯ್ಯ, ಜಗನ್ನಾಥ ಕುಲಕರ್ಣಿ, ದೊಮಕುಂಟಿ ನಾರಾಯಣಪ್ಪ, ಮಟಮಾರಿ ಶರಬಣ್ಣ ಪೊಲೀಸ್ ಬಸಪ್ಪ ವೀರಯ್ಯ ಸ್ವಾಮಿ, ಮಾನ್ವಿ ವಿನಾಯಕ ರಾಮಚಂದ್ರ ಪಾಟೀಲ ಜಯರಾಮರೆಡ್ಡಿ, ಹೊಸಮನಿ, ಆದಿರಾಜಶೇಖರಪ್ಪ ಕುಲ್ಕರ್ಣಿ ಶರಬಣ್ಣ ಮಟಮಾರಿ, ಅಮರೇಶ ಪಾಟೀಲ ಅಲ್ಕುಡ ಇಲ್ಲೂರು, ಪಾಂಡುರಂಗಪ್ಪ, ಎಂ.ಬಸನಗೌಡ ಇಲ್ಲೂರು, ನರಸಿಂಗಪ್ಪ ಗುಪ್ತಾ ಮುದ್ದೂರು ಸ್ವಾಮಿ, ಕೆ.ಗುರುರಾವ್, ಎ.ವೆಂಕೋಬ, ಡಾ॥ಎಸ್.ರಾಮಕೃಷ್ಣ, ಎಂ.ಪರ್ವತರೆಡ್ಡಿ, ಬಸಣ್ಣ ಜಯರಾಮಪ್ಪ ಇಲ್ಲೂರು, ಪಿ.ಸೂಗಣ್ಣ ಎಂ.ಚಂದ್ರಯ್ಯ ಡಿ.ಕೆ.ಜಗನ್ನಾಥರಾವ್, ಎಂ.ಪಂಪಣ್ಣ ಬಾಬುರಾವ್, ಹರವಾರ ತಿವುಡಿ ಭೀಮಯ್ಯ.

ಈ ಎಲ್ಲಾ ದೇಶಪ್ರೇಮಿಗಳು ದೇಶದ ಸ್ವಾತಂತ್ರ್ಯ ಮತ್ತು ಹೈದ್ರಾಬಾದ್ ಕರ್ನಾಟಕ ವಿಮೋಚನ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡ ಇವರು ಮರೆಯಲಾಗದ ಮಾಣಿಕ್ಯಗಳು.